ಹೆಚ್ಚುವರಿ ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ

ಸಿ .ಸಿ.ನಂ.658-11 ಪಿಡಬ್ಲ್ಯು 4

ಸಿಡಬ್ಲ್ಯು 5

ಸತ್ಯ ಪ್ರತಿಜ್ಞೆಯ ಮೇರೆಗೆ

ಹೆಸರು ಃ ಬಬನ ನಾರಾಯಣ ಪಾಟೀಲ

ವಯಸ್ಸು ಃ 55 ವರ್ಷ

ಉದ್ಯೋಗ ಃಶೇತ್ಕಿ

ವಾಸ ಃ ಕಸಬಾನಂದಗಡ , ತಾಃ ಖಾನಾಪೂರ

ದಿನಾಂಕ ಃ 13-10-2015 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದ.

ಸುಮಾರು ನಾಲ್ಕು ವರ್ಷದ ಹಿಂದೆ ನನ್ನನ್ನು ಪೋಲಿಸರು ಚಾಪಗಾಂವ ಗ್ರಾಮದಲ್ಲಿ ಕರೆಯಿಸಿ ಒಂದು ದಾಖಲಾತಿಯ ಮೇಲೆ ನನ್ನ ಸಹಿ ಪಡೆದಿರುತ್ತಾರೆ ಅದರಲ್ಲಿ ಏನೇನು ಬರೆದಿದ್ದಾರೆ ನನಗೆ ಗೊತ್ತಿಲ್ಲ, ನನ್ನ ಸಮಕ್ಷಮ ಯಾವುದೇ ಪತ್ರಗಳಾಗಲಿ ಅಥವಾ ದಾಖಲೆಗಳಾಗಲಿ ಜಪ್ತುಮಾಡಿಕೊಂಡಿರುವುದಿಲ್ಲ. ಪಂಚನಾಮೆಯನ್ನು ಈಗ ಸಾಕ್ಷಿಯು ನೋಡುತ್ತಿದ್ದು ಅದನ್ನು ಈಗಾಗಲೆ ನಿಪಿ 4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ4(ಬಿ) ಎಂದು ಗುರುತಿಸಲಾಯಿತು. ನಿಪಿ4ರಲ್ಲಿ ಏನು ಬರೆದಿದ್ದಾರೆ ನನಗೆ ಗೊತ್ತಿಲ್ಲ.

ಸಸಅರವರು ಸಾಕ್ಷಿಯನ್ನು ಪ್ರತೀಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ವಿನಂತಿಸಿದ್ದು ಅನುಮತಿ ನೀಡಲಾಗಿದೆ.

ಪಾಟೀ ಸವಾಲು ಃ ಎಪಿಪಿ ಅವರಿಂದ.

ದಿಃ 9-2-2011ರಂದು ನನ್ನನ್ನು ಹಾಗೂ ಚಾಸಾ4ರವರನ್ನು ನಂದಗಡ ಪೋಲಿಸ ಠಾಣೆಗೆ ಕರೆಯಿಸಿ ಚಾಸಾ1ರವರು ಹಾಜರಪಡಿಸಿದ ಆರೋಪಿಯ ನೇಮಕಾತಿ ಪತ್ರ ಮುಂತಾದ ನಿಪಿ4ರಲ್ಲಿ ಅನುಕ್ರಮ ನಂ.1ರಿಂದ 6ರವರೆಗಿನ ದಾಖಲಾತಿಗಳನ್ನು ಹಾಜರಪಡಿಸಿದಾಗ ಪೋಲಿಸರು ಅವುಗಳನ್ನು ಜಪ್ತುಪಡಿಸಿಕೊಂಡು ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿದಾಗ ನಾನು ಹಾಗೂ ಚಾಸಾ4ರವರು ಹಾಜರಿದ್ದು , ಪಂಚನಾಮೆಗೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಇಲ್ಲ.

ಮರುವಿಚಾರಣೆ ಇಲ್ಲ

ಓ .ಹೇ .ಕೇ .ಸರಿ ಇದೆ .

ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು

ಖಾನಾಪೂರ.

ಹೆಚ್ಚುವರಿ ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ

ಸಿ .ಸಿ.ನಂ.658-11 ಪಿಡಬ್ಲು 3

ಸಿಡಬ್ಲು 4

ಸತ್ಯ ಪ್ರತಿಜ್ಞೆಯ ಮೇರೆಗೆ

ಹೆಸರು ಃ ಅಪ್ಪಾಜಿ ಹಣಮಂತ ಪಾಟೀಲ

ವಯಸ್ಸು ಃ 62 ವರ್ಷ

ಉದ್ಯೋಗ ಃಶೇತ್ಕಿ

ವಾಸ ಃ ಕಸಬಾನಂದಗಡ , ತಾಃ ಖಾನಾಪೂರ

ದಿನಾಂಕ ಃ 13-10-2015 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದ.

ಸುಮಾರು ನಾಲ್ಕು ವರ್ಷದ ಹಿಂದೆ ನನ್ನನ್ನು ಪೋಲಿಸ ಠಾಣೆಗೆ ಕರೆಯಿಸಿ ಒಂದು ದಾಖಲಾತಿಯ ಮೇಲೆ ನನ್ನ ಸಹಿ ಪಡೆದಿರುತ್ತಾರೆ ಅದರಲ್ಲಿ ಏನೇನು ಬರೆದಿದ್ದಾರೆ ನನಗೆ ಗೊತ್ತಿಲ್ಲ, ನನ್ನ ಸಮಕ್ಷಮ ಯಾವುದೇ ಪತ್ರಗಳಾಗಲಿ ಅಥವಾ ದಾಖಲೆಗಳಾಗಲಿ ಜಪ್ತುಮಾಡಿಕೊಂಡಿರುವುದಿಲ್ಲ. ಪಂಚನಾಮೆಯನ್ನು ಈಗ ಸಾಕ್ಷಿಯು ನೋಡುತ್ತಿದ್ದು ಅದನ್ನು ನಿಪಿ 4 ಎಂದು , ಸಾಕ್ಷಿಯ ಸಹಿಯನ್ನು ನಿಪಿ4(ಎ) ಎಂದು ಗುರುತಿಸಲಾಯಿತು. ನಿಪಿ4ರಲ್ಲಿ ಏನು ಬರೆದಿದ್ದಾರೆ ನನಗೆ ಗೊತ್ತಿಲ್ಲ.

ಸಸಅರವರು ಸಾಕ್ಷಿಯನ್ನು ಪ್ರತೀಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ವಿನಂತಿಸಿದ್ದು ಅನುಮತಿ ನೀಡಲಾಗಿದೆ.

ಪಾಟೀ ಸವಾಲು ಃ ಎಪಿಪಿ ಅವರಿಂದ.

ದಿಃ 9-2-2011ರಂದು ನನ್ನನ್ನು ಹಾಗೂ ಚಾಸಾ5ರವರನ್ನು ನಂದಗಡ ಪೋಲಿಸ ಠಾಣೆಗೆ ಕರೆಯಿಸಿ ಚಾಸಾ1ರವರು ಹಾಜರಪಡಿಸಿದ ಆರೋಪಿಯ ನೇಮಕಾತಿ ಪತ್ರ ಮುಂತಾದ ನಿಪಿ4ರಲ್ಲಿ ಅನುಕ್ರಮ ನಂ.1ರಿಂದ 6ರವರೆಗಿನ ದಾಖಲಾತಿಗಳನ್ನು ಹಾಜರಪಡಿಸಿದಾಗ ಪೋಲಿಸರು ಅವುಗಳನ್ನು ಜಪ್ತುಪಡಿಸಿಕೊಂಡು ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿದಾಗ ನಾನು ಹಾಗೂ ಚಾಸಾ5ರವರು ಹಾಜರಿದ್ದು , ಪಂಚನಾಮೆಗೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಇಲ್ಲ.

ಮರುವಿಚಾರಣೆ ಇಲ್ಲ

ಓ .ಹೇ .ಕೇ .ಸರಿ ಇದೆ .

ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು
ಖಾನಾಪೂರ.

ಹೆಚ್ಚುವರಿ ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ
ಸಿ .ಸಿ.ನಂ. 658-11

ಪಿಡಬ್ಲ್ಯು ಃ1
ಸಿಡಬ್ಲ್ಯುಃ1

ಹೆಸರು ಃ ರುಕ್ಮುದ್ದಿನ ಅಬ್ದುಲ ಮುಜಾವರ

ವಯಸ್ಸು ಃ 34 ವರ್ಷ

ಉದ್ಯೋಗ ಃಅಂಚೆ ಸಹಾಯಕ , ಕಿತ್ತೂರ ಅಂಚೆ ಕಚೇರಿ ,

ವಾಸ ಃ ಕಿತ್ತೂರ

ದಿನಾಂಕಃ15-3-14

ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು

ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದ.

ನಾನು ಬೆಳಗಾವಿ ದಕ್ಷಿಣ ವಿಭಾಗದ ಅಂಚೆ ನಿರೀಕ್ಷಕನಾಗಿ ದಿಃ1-7-2010ರಿಂದ 12-12-2012ರವರೆವಿಗೆ ಕಾರ್ಯನಿರ್ವಹಿಸಿದ್ದೇನೆ. ಅಗ ನನ್ನ ಅಧಿಕಾರಿ ವ್ಯಾಪ್ತಿಯಲ್ಲಿ 50 ಹಳ್ಳಿಗಳು ಇದ್ದವು , ಅದರಲ್ಲಿ ಚಾಪಗಾಂವ ಸಹ ಒಂದು ಹಳ್ಳಿ ಅಗಿತ್ತು.

ನಾನು ಅ ರೀತಿ ಅಂಚೆ ನಿರೀಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದಾಗ ನಮ್ಮ ಮೇಲಾಧಿಕಾರಿಗಳಾದ ಅಂಚೆ ಅ ಧೀಕ್ಷಕರು ಬೆಳಗಾವಿ ಜಿಲ್ಲೆ ಬೆಳಗಾವಿ ಇವರು ತಮ್ಮ ಅದೇಶ ನಂ.ಎಫ್-2-3-2-1-06-07ರ ದಿಃ16-8-2010ರಂದು ಚಾಪಗಾಂವ ಅಂಚೆ ಉಪ ಕಚೇರಿಯಲ್ಲಿ ಅಲ್ಲಿಯ ಪೊಸ್ಟ ಮಾಸ್ಟರಾಗಿದ್ದ ಅರೋಪಿಯು ದಿಃ10-4-2006ರಂದು ಅಂಚೆ ಕಚೇರಿಯ ಶುಲ್ಕು ಹಣ (ಒಪನಿಂಗ್ ಬ್ಯಾಲನ್ಸ) 8462-75 ರೂ. ಹಣವನ್ನು ದುರೂಪಯೋಗಮಾಡಿಕೊಂಡು ಸ್ವಂತಕ್ಕೆ ಬಳಿಸಿಕೊಂಡಿದ ಬಗ್ಗೆ ದೂರನ್ನು ನೀಡಲು ತಿಳಿಸಿದಂತೆ ನಾನು ದಿಃ9-2-2011ರಂದು ನಂದಗಡ ಪೋಲಿಸ ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಕೊಟ್ಟಿರುತ್ತೇನೆ , ದೂರನ್ನು ನಿಪಿ1 ಎಂದು , ಸಾಕ್ಷಿಯ ಸಹಿಯನ್ನು ನಿಪಿ1ಎ ಎಂದು ಗುರುತಿಸಲಾಯಿತು. ನಾನು ದೂರು ಕೊಟ್ಟ ದಿನದಂದೆ ಪೋಲಿಸರಿಗೆ ಅರೋಪಿಯ ನೇಮಕಾತಿ ಅದೇಶ ಪತ್ರ , ಅಂಚೆ ನಿರೀಕ್ಷಕರ ದಿಃ10-4-2006ರ ಮಹಾಜರ ಮತ್ತು ಚಾಪಗಾಂವ ಅಂಚೆ ಕಚೇರಿಯ ದಿಃ6-4-06 , 7-4-06 , 8-4-06 , 10-4-06 ಹಾಗೂ 12-4-06ರ ಒಟ್ಟು ಐದು ಬ್ಯಾಂಚ್ ಅಫಿಸ್ ಸ್ಲಿಪ್(ಬಿ ಒ ಸ್ಲಿಪ್) ಸಹ ಕೊಟ್ಟಿರುತ್ತೇನೆ, ದಿಃ1-8-05ರಿಂದ ದಿಃ11-4-06ರವರೆಗಿನ ಬಿ ಒ ಅಕೌಂಟ್ ಬುಕ್ ಸಹ ಕೊಟ್ಟಿರುತ್ತೇನೆ, ದಿಃ10-4-06ರಂದು ಅರೋಪಿಯು ಕೊಟ್ಟ ಹೇಳಿಕೆ ಪತ್ರವನ್ನು ಸಹ ಕೊಟ್ಟಿರುತ್ತೇನೆ, ಅರೋಪಿಯು ತಪ್ಪು ಒಪ್ಪಿಕೊಂಡು 33000-00 ರೂಪಾಯಿಗಳನ್ನು ಇಲಾಖೆಗೆ ತುಂಬಿದ ಬಗ್ಗೆ ಹಣ ಪಾವತಿಯನ್ನು ಸಹ ಕೊಟ್ಟಿರುತ್ತೇನೆ, ಅವುಗಳು ಚಾಸಾ4 ಮತ್ತು 5ರವರ ಸಮಕ್ಷಮ ಅದೇ ದಿನ ಪೋಲಿಸರು ದಾಖಲಾತಿ ಜಪ್ತಿ ಪಂಚನಾಮೆ ಬರೆದು ಜಪ್ತಿ ಮಾಡಿಕೊಂಡಿರುತ್ತಾರೆ. ನನಗೆ ಅಂಚೆ ಅಧೀಕ್ಷಕರು ಕೊಟ್ಟ ಅದೇಶವನ್ನು ಹಾಜರಪಡಿಸಿದ್ದು ಅದನ್ನು ನಿಪಿ2 ಎಂದು, ಸಾಕ್ಷಿಯ ಸಹಿಯನ್ನು ನಿಪಿ2ಎ ಎಂದು ಗುರುತಿಸಲಾಯಿತು. ನಂತರ ನಾನು ದಿಃ10-2-2011ರಂದು ಪಂಚನಾಮೆಯ ಕಾಲದಲ್ಲಿ

ಪಂಚನಾಮೆಗೆ ಪೋಲಿಸರಿಗೆ ಜಾಗೆಯನ್ನು ತೋರಿಸಿರುತ್ತೇನೆ, ಪಂಚನಾಮೆಯ ಕಾಲದಲ್ಲಿ ಚಾಸಾ2 ಮತ್ತು 3 ಪಂಚರು ಹಾಜರಿದ್ದರು . ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ಸಹ ನೀಡಿದ್ದೇನೆ.

ಪಾಟೀ ಸವಾಲುಃ ಅರೋಪಿಯು ಹಾಜರಿದ್ದು, ಪಾಟೀ ಸವಾಲು ಮಾಡಲು ಹೇಳಿದಾಗ ಅತನು ತನ್ನ ವಕೀಲರು ಇಲ್ಲ ಎಂದು ಕಾಲಾವಕಾಶ ಕೋರಿದ್ದು , ಅತನ ಕೋರಿಕೆಯಲ್ಲಿ ಯಾವುದೇ ಸಕಾರಣ ಇಲ್ಲದೆ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾ .ದಲ್ಲಿ ನನ್ನ ಹೇ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ .ಹೇ .ಕೇ .ಸರಿ ಇದೆ .

ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು ಖಾನಾಪೂರ.